NS – 016

# ಮೂರನೇ ಸೆಮಿಸ್ಟರ್ ಬಿ.ಬಿ.ಎ. ಪರೀಕ್ಷೆ, ನವೆಂಬರ್/ಡಿಸೆಂಬರ್ 2016

**(F+R) (ಸಿ.ಬಿ.ಸಿ.ಎಸ್.)**

**(2015-16 and Onwards)**

**ಕನ್ನಡ ಭಾಷಾ ಪತ್ರಿಕೆ – III**

**ಸುವರ್ಣ ಸಂಪದ**

ಅವಧಿ : 3 ಗಂಟೆಗಳು ಗರಿಷ್ಠಾಂಕಗಳು : 70

I. ಅ) **ಒಂದು** ಪದ್ಯದ ಭಾವಾರ್ಥವನ್ನು ಬರೆಯಿರಿ. (1×6=6)

1) ಕಟ್ಟಿದ ಪಟ್ಟಮೆ ಸರವಿಗೆ
ನೆಟ್ಟನೆ ದೊರೆ ಪಿಡಿದ ಬಿಲ್ಲೆ ದಂಟಿಂಗೆಣೆ ಕ|
ಣ್ಗೆಟ್ಟ ಮುದುಪಂಗೆ ಪಗೆವರ
ನೆಟ್ಟಿಲ್ವಂ ಮುಱಿವೊಡೆನಗೆ ಪಟ್ಟಂಗಟ್ಟಾ||

2) ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ
ನಾಯ ಹಾಲು–ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ
ನಮ್ಮ ಕೂಡಲಸಂಗನ ಶರಣರಿಗಲ್ಲದೆ
ಮಾಡುವ ಅರ್ಥ ವ್ಯರ್ಥ ಕಂಡಯ್ಯ

ಆ) **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ. (2×2=4)

1) ಚೆನ್ನಮಲ್ಲಿಕಾರ್ಜುನ
2) ರಾಘವಾಂಕ
3) ರಗಳೆ
4) ಸಿದ್ಧರಾಮ.

ಇ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ವಶಿಷ್ಠ–ವಿಶ್ವಾಮಿತ್ರರ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.
2) ಕಣ್ಣಪ್ಪನ ಮುಗ್ಧ ಭಕ್ತಿಗೆ ಶಿವ ತೋರುವ ಪ್ರತಿಕ್ರಿಯೆಯ ಸ್ವರೂಪ ಎಂಥದ್ದು? ವಿವರಿಸಿ.

P.T.O.

II. ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. (2×5=10)

1) ರಿಲಯನ್ಸ್ ಕಂಪನಿ ಎಸಗಿದ ಮೋಸದ ತಂತ್ರ.

2) ಮಹಿಳೆಯರ ಆರ್ಥಿಕ ಸ್ವಾತಂತ್ರ್ಯದಲ್ಲಿ ಮಹಿಳಾ ಉದ್ಯಮದ ಪಾತ್ರ.

3) ತಂತ್ರಜ್ಞಾನ ಮತ್ತು ಇಂಗ್ಲೀಷ್‌ನ ಸಂಬಂಧ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) ಗಾಂಧೀಜಿ ಕಾಲದ ಮತ್ತು ಇಂದಿನ ಬಂಡವಾಳಶಾಹಿ ಅರ್ಥವ್ಯವಸ್ಥೆಯ ಸ್ವರೂಪವನ್ನು ಕುರಿತು ಬರೆಯಿರಿ.

2) 'ಉದ್ಯೋಗ-ಉದ್ದಿಮೆಗಳಲ್ಲಿ ಮಹಿಳೆ' ಲೇಖನದಲ್ಲಿನ ಡಾ. ಎಂ. ಉಷಾ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ ಬರೆಯಿರಿ.

III. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. (1×5=5)

1) ಜನಪದ-ಜಾನಪದ ಇವುಗಳ ಅರ್ಥವಲಯವನ್ನು ಸ್ಪಷ್ಟಪಡಿಸಿ.

2) ಎಚ್. ನರಸಿಂಹಯ್ಯನವರ ಪ್ರಕಾರ ವಿದ್ಯಾವಂತರ ಮೂಢನಂಬಿಕೆಗಳು.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ''ಸಿನೆಮಾ ಒಂದು ಜಾನಪದ ಕಲೆಯೇ ?'' ವಿಚಾರಮಾಡಿ.

2) ''ಕನ್ನಡ ಮತ್ತು ಬ್ಲಾಗ್ ಲೋಕ''ದ ಮೂಲಕ ಎಂ. ಎಸ್. ಶ್ರೀ ರಾಮ್ ವ್ಯಕ್ತಪಡಿಸಿರುವ ವಿಚಾರಗಳೇನು ?

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. (1×5=5)

1) ಆನ್‌ಲೈನ್ ಮಾರುಕಟ್ಟೆಯಲ್ಲಿ ಗ್ರಾಹಕರ ಜವಾಬ್ದಾರಿ.

2) ಪ್ರಬುದ್ಧ ವೀಕ್ಷಕ ವರ್ಗದ ಬಗ್ಗೆ ಲೇಖಕರ ವಿಚಾರಗಳು.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ಶರತ್‌ಬಾಬುವಿನ ಶೈಕ್ಷಣಿಕ ಸಾಧನೆ ಮತ್ತು ಆತ ಕೋಟ್ಯಾಧಿಪತಿಯಾದ ಬಗೆಯನ್ನು ವಿವರಿಸಿ.

2) ಟಿ. ಆರ್. ಪಿ.ಯ ಅನಿವಾರ್ಯ ಹಾಗೂ ಅದರ ಅವಾಂತರಗಳನ್ನು ಬರೆಯಿರಿ.

———————